# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಜನೂರು ಅಗ್ರಹಾರ.ಶಿವಮೊಗ್ಗ:ತಾ

ತರಗತಿ:6 ವಿಷಯ:ಕನ್ನಡ ಮಾರ್ಗದರ್ಶಕರು:ಶ್ರೀ ಸೋಮಲಿಂಗಪ್ಪ ಜೆ

## ಬೇಸಿಗೆ –ಪದ್ಯ



### ೧. ಬೇಸಿಗೆ

–ಬಿ.ಆರ್.ಲಕ್ಷ್ಮಣರಾವ್

**ಪ್ರವೇಶ :** ಮಾನವರಾದ ನಾವು ಪ್ರಕೃತಿಯಿಂದ ಕಲಿಯಬೇಕಾದದ್ದು ಅಪಾರ. ಪ್ರಕೃತಿಯ ಪ್ರತಿಯೊಂದು ವಸ್ತುವೂ ಪರಸ್ಪರ ಸಂಬಂಧವುಳ್ಳದ್ದಾಗಿರುತ್ತವೆ. ಅಂತೆಯೇ ಋತುಮಾನಗಳು ಕೂಡ ಅವು ಬದಲಾದಂತೆ ಹವಾಮಾನವು ಏರುಪೇರಾಗುತ್ತಿರುತ್ತದೆ. ಒಮ್ಮೆ ಪ್ರಖರವಾದ ಬಿಸಿಲು, ಮತ್ತೊಮ್ಮೆ ಗಡಗಡ ನಡುಗುವ ಚಳಿ, ಮಳೆ, ಗಾಳಿ-ಹಿಮ ಏನೇ ಆದರೂ ಯಾವುದೇ ಕೆಲಸಕಾರ್ಯಗಳು ನಿಲ್ಲುವುದಿಲ್ಲ. ಪ್ರಕೃತಿಯು ಸಮತೋಲನವನ್ನು ಕಾಯ್ದುಕೊಂಡು ತನ್ನ ಪಾಲಿನ ಕೆಲಸವನ್ನು ಸದಾ ನಿರ್ವಹಿಸುತ್ತ ಇರುತ್ತದೆ.

ಬಂದಿದೆ ಬೇಸಿಗೆ ರಜಾ
ಇದ್ದರೂ ಬಿಸಿಲಿನ ಸಜಾ
ಬನ್ನಿ ಆಡೋಣ,
ಸೂರ್ಯನ ಮಹಿಮೆಯ ಹಾಡೋಣ.



ಏಕೆ ರವಿಗಿಂತ ತಾಪ?
ಯಾರ ಮೇಲವನ ಕೋಪ?
ಎಂದು ಹಳಿಯಬೇಡಿ,
ಸೂರ್ಯನ ತಪ್ಪು ತಿಳಿಯಬೇಡಿ.
ಮೋಡ ಕೂಡಿಸಲು, ಇಳೆಗೆ ಮಳೆ ಕರೆಯಲು
ದುಡಿಯುತಿಹನು, ಪಾಪ!

ಭೂಮಿಯ ಪೋಷಕ ಸೂರ್ಯ
ಭೂಮಿಗವನು ಅನಿವಾರ್ಯ
ಹೊಗಳಿಕೆ ಬೇಕಿಲ್ಲ,
ತೆಗಳಿದರೆ ಅವ ಕುಗ್ಗುವುದಿಲ್ಲ
ಬೆಳಕ ನೀಡುವನು, ಬಿಸಿಯನೂಡುವನು
ಮರೆಯದೆ ಕರ್ತವ್ಯ

©KTBS Not to be republished

LIVEWORKSHEETS